# ನಗರಸಭಾ ಕಾರ್ಯಾಲಯ, ತುಮಕೂರು.

ನಂ.ನಸತು/ತಾಂಶಾ/ಟೆಂಡರ್/ಸಿಆರ್/ /2008-09 ದಿನಾಂಕ: 09-07-2009.

## ಅಲ್ಪಾವಧಿ ಟೆಂಡರ್ ಪ್ರಕಟಣೆ

ತುಮಕೂರು ನಗರಸಭಾ ವ್ಯಾಪ್ತಿಯ ಸೋಮೇಶ್ವರ ರಸ್ತೆ ಅಗಲೀಕರಣಗೊಳಿಸುತ್ತಿದ್ದು ರಸ್ತೆಯ ಎರಡು ಬದಿಯಲ್ಲಿ ಹಾಲಿ ಇರುವ ಪೈಪ್‌ಲೈನ್‌ನ್ನು ಬದಲಾಯಿಸಲು ಆಸಕ್ತಿಯುಳ್ಳ ಲೋಕೋಪಯೋಗಿ ಇಲಾಖೆಯಲ್ಲಿ 3ನೇ ದರ್ಜೆ ಮತ್ತು ಮೇಲ್ಪಟ್ಟ ಗುತ್ತಿಗೆದಾರರು ಟೆಂಡರ್‌ನಲ್ಲಿ ಭಾಗವಹಿಸಬಹುದು.

1. ಟೆಂಡರ್ ಫಾರಂಗಳನ್ನು ನೀಡುವ **ದಿನಾಂಕ 17-07-2009 ರಿಂದ 01-08-2009** ರವರಗೆಗೆ ಕಛೇರಿಯ ವೇಳೆಯಲ್ಲಿ ಟೆಂಡರ್ ಶುಲ್ಕ ಪಾವತಿಸಿದ ಅರ್ಹ ಗುತ್ತಿಗೆದಾರರಿಗೆ ನೀಡಲಾಗುವುದು.
2. ಭರ್ತಿ ಮಾಡಿದ ಫಾರಂಗಳನ್ನು **ದಿನಾಂಕ 03-08-2009 ರಂದು 4.30 ಗಂಟೆಯೊಳಗಾಗಿ** ಪೌರಾಯುಕ್ತರು, ನಗರಸಭೆ, ತುಮಕೂರು ರವರ ಕೊಠಡಿಯಲ್ಲಿ ಇಟ್ಟಿರುವ ಟೆಂಡರ್ ಬಾಕ್ಸ್‌ನಲ್ಲಿ ಅಥವಾ ಮಾನ್ಯ ಯೋಜನಾ ನಿರ್ದೇಶಕರು, ಜಿಲ್ಲಾ ನಗರಾಭಿವೃದ್ಧಿ ಕೋಶ, ತುಮಕೂರು ರವರ ಕಛೇರಿಯ ಟೆಂಡರ್ ಬಾಕ್ಸ್‌ನಲ್ಲಿ ಹಾಕಬಹುದಾಗಿದೆ.
3. **ಸಲ್ಲಿಸಲಾಗಿರುವ ಟೆಂಡರ್‌ಗಳನ್ನು ಸಾಧ್ಯವಾದರೆ ದಿನಾಂಕ 03-08-2009 ರಂದು 4.45** ಗಂಟೆಗೆ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು. ಅಥವಾ ಮರುದಿನ ಕಛೇರಿ ವೇಳೆಯಲ್ಲಿ ಹಾಜರಿರುವ ಗುತ್ತಿಗೆದಾರರ ಸಮ್ಮುಖದಲ್ಲಿ ತೆರೆಯಲಾಗುವುದು.

| ಕ್ರ.ಸಂ. | ಕಾಮಗಾರಿ ಹೆಸರು | ಅಂದಾಜು ಮೊತ್ತ (ಲಕ್ಷಗಳಲ್ಲಿ) | ಇಎಂಡಿ ಮೊತ್ತ ರೂಗಳಲ್ಲಿ | ಟೆಂಡರ್ ಫಾರಂ ಬೆಲೆ | ಗುತ್ತಿಗೆದಾರರು | ಕಾಲಾವಧಿ |
|---|---|---|---|---|---|---|
| 1 | ತುಮಕೂರು ನಗರಸಭಾ ವ್ಯಾಪ್ತಿಯ ಎಸ್.ಎಸ್.ಪುರಂ ಮುಖ್ಯ ರಸ್ತೆಯ ಭೈರವೇಶ್ವರ ಬ್ಯಾಂಕ್‌ನಿಂದ ಕೆಂಪಣ್ಣ ಅಂಗಡಿ ಸರ್ಕಲ್‌ವರೆಗೆ ರಸ್ತೆಯ ಎರಡು ಬದಿಯಲ್ಲಿ ಪೈಪ್‌ಲೈನ್ ಅಳವಡಿಸುವುದು. | 7.50 | 15000.00 | 750+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ 3ನೇ ದರ್ಜೆ ಮತ್ತು ಮೇಲ್ಪಟ್ಟ | 20 ದಿನಗಳು |
| 2 | ತುಮಕೂರು ನಗರಸಭಾ ವ್ಯಾಪ್ತಿಯ ಎಸ್.ಎಸ್.ಪುರಂ ಮುಖ್ಯ ರಸ್ತೆಯ ಕೆಂಪಣ್ಣ ಅಂಗಡಿ ಸರ್ಕಲ್‌ನಿಂದ ಗಂಗೋತ್ರಿ ಟ್ಯಾಂಕ್‌ವರೆಗೆ ರಸ್ತೆಯ ಎರಡು ಬದಿಯಲ್ಲಿ ಪೈಪ್‌ಲೈನ್ ಅಳವಡಿಸುವುದು. | 7.50 | 15000.00 | 750+ ತೆರಿಗೆ | ಲೋಕೋಪಯೋಗಿ ಇಲಾಖೆಯಲ್ಲಿ 3ನೇ ದರ್ಜೆ ಮತ್ತು ಮೇಲ್ಪಟ್ಟ | 20 ದಿನಗಳು |

### ಷರತ್ತುಗಳು

1. ಟೆಂಡರ್ ಫಾರಂ ಬೆಲೆಯನ್ನು ನಗದಾಗಿ ನಗರಸಭೆಯ ನಗದು ಶಾಖೆಯಲ್ಲಿ ಪಾವತಿಸಿ ಅರ್ಜಿ ಸಲ್ಲಿಸಬಹುದಾಗಿದೆ. ಅರ್ಜಿಯನ್ನು ಸಲ್ಲಿಸುವಾಗ ಲೋಕೋಪಯೋಗಿ ಇಲಾಖೆಯಲ್ಲಿ ಅರ್ಹ ದರ್ಜೆ ನೊಂದಾಯಿತರಾಗಿರುವ ಬಗ್ಗೆ ಪ್ರಮಾಣ ಪತ್ರವನ್ನು ಹಾಜರುಪಡಿಸಿ ದಾಖಲಾತಿ ಪುಸ್ತಕ (ಪಾಸ್ ಬುಕ್)ದಲ್ಲಿ ದಾಖಲಾತಿ ಮಾಡಿಸಿಕೊಳ್ಳಬೇಕು.
2. ಇಎಂಡಿ ಹಣವನ್ನು ಪೌರಾಯುಕ್ತರು, ನಗರಸಭೆ, ತುಮಕೂರು ಇವರ ಹೆಸರಿಗೆ ಜಮಾ ಮಾಡಬಹುದಾದಂತಹ ಡಿಡಿ / ಎಫ್‌ಡಿಆರ್‌ಗಳನ್ನು ಅಥವಾ ನಗರಸಭಾ ಕಾರ್ಯಾಲಯದಲ್ಲಿ ಜಮಾ ಮಾಡಿ ರಸೀದಿಯೊಂದಿಗೆ ಟೆಂಡರ್ ಜೊತೆಯಲ್ಲಿ ಸಲ್ಲಿಸಬೇಕು.
3. ಟೆಂಡರ್ ಫಾರಂನಲ್ಲಿ ದರವನ್ನು ಅಂಕಿ ಮತ್ತು ಅಕ್ಷರಗಳಲ್ಲಿ ಸ್ಪಷ್ಟವಾಗಿ ನಮೂದಿಸಬೇಕು.
4. ಮೇಲೆ ನಿಗಧಿಪಡಿಸಿರುವ ಯಾವುದೇ ದಿನಾಂಕಗಳು ಸರ್ಕಾರಿ ರಜಾ ದಿನಗಳೆಂದು ಘೋಷಿಸಲ್ಪಟ್ಟಲ್ಲಿ ಮುಂದಿನ ಕೆಲಸದ ದಿನವನ್ನು ಪರಿಗಣಿಸಲಾಗುವುದು.
5. ನಿಬಂಧನೆಗಳನ್ನು ನಮೂದಿಸಿ ಸಲ್ಲಿಸುವ ಟೆಂಡರ್‌ಗಳನ್ನು ತಿರಸ್ಕರಿಸಲಾಗುವುದು.
6. ಯಾವ ಕಾರಣವನ್ನು ಸಹ ನೀಡದೆ ಯಾವುದೇ ಅಥವಾ ಎಲ್ಲಾ ಟೆಂಡರ್‌ಗಳನ್ನು ತಿರಸ್ಕರಿಸುವ ಅಧಿಕಾರವನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
7. ಮೇಲಿನ ಕಾಮಗಾರಿಯಲ್ಲಿ ಏನಾದರೂ ಸೇರ್ಪಡೆ ಅಥವಾ ಮಾರ್ಪಡಿಸುವ ಹಕ್ಕನ್ನು ನಗರಸಭೆ ಕಾಯ್ದಿರಿಸಿಕೊಂಡಿದೆ.
8. ಕಾಮಗಾರಿಗೆ ಬೇಕಾದ ಎಲ್ಲಾ ಸಾಮಗ್ರಿಗಳನ್ನು ಗುತ್ತಿಗೆದಾರರೇ ಒದಗಿಸಿಕೊಳ್ಳತಕ್ಕದ್ದು.

9. ಟೆಂಡರ್ ಫಾರಂಗಳನ್ನು ಪಡೆಯುವ ಸಂದರ್ಭದಲ್ಲಿ ಮತ್ತು ಟೆಂಡರ್ ಸಲ್ಲಿಸುವ ಸಮಯದಲ್ಲಿ ಪಾಸ್ ಬುಕ್‌ನಲ್ಲಿ ರೆಕಾರ್ಡ್ ಮಾಡಿಸಿಕೊಳ್ಳಬೇಕು.

10. ಗುತ್ತಿಗೆದಾರರು ಟೆಂಡರ್ ಸಲ್ಲಿಸುವಾಗ 'ಬಿ' ಷೆಡ್ಯೂಲ್‌ನಲ್ಲಿ ದರಗಳನ್ನು ನಮೂದಿಸುವಾಗ ಸ್ಪಷ್ಟವಾಗಿ ಒಂದೇ ರೀತಿಯ ಬರವಣಿಗೆಯಲ್ಲಿ ಪ್ರತಿ ಪುಟಕ್ಕೂ ಸಹಿಯೊಂದಿಗೆ ಯಾವುದೇ ರೀತಿಯ ವ್ಯತ್ಯಾಸವಾಗದಂತೆ ನಮೂದಿಸಬೇಕು. ಇಲ್ಲವಾದಲ್ಲಿ ಟೆಂಡರ್‌ಗಳನ್ನು ಪರಿಗಣಿಸಲಾಗುವುದಿಲ್ಲ.

11. ಈ ಕಾಮಗಾರಿಗೆ ಕಾರ್ಯಾದೇಶದ ನೀಡಿದ ದಿನಾಂಕದಿಂದ 24 ಗಂಟೆಗಳೊಳಗಾಗಿ ಖಡ್ಡಾಯವಾಗಿ ಕಾಮಗಾರಿ ಪ್ರಾರಂಭಿಸತಕ್ಕದ್ದು.

12. ಸದರಿ ಕೆಲಸ ನಿರ್ವಹಿಸುವ ಸಂದರ್ಭದಲ್ಲಿ ಯಾವುದೇ ವಿದ್ಯುತ್ ಅವಘಡಗಳಿಂದ ಅಪಘಾತಗಳು ಉಂಟಾದಲ್ಲಿ / ಪ್ರಾಣ ಹಾನಿ ಉಂಟಾದಲ್ಲಿ ನಗರಸಭೆ ಜವಾಬ್ದಾರರಾಗಿರುವುದಿಲ್ಲ.

13. ಹೆಚ್ಚಿನ ಮಾಹಿತಿಗಾಗಿ ವೆಬ್‌ಸೈಟ್: www.tumkurcity.gov.in ಹಾಗೂ ನಗರಸಭೆ ತಾಂತ್ರಿಕ ಶಾಖೆಯಲ್ಲಿ ಕಛೇರಿ ವೇಳೆಯಲ್ಲಿ ಪಡೆಯಬಹುದು.

| ಅಧ್ಯಕ್ಷರು | ಉಪಾಧ್ಯಕ್ಷರು | ಸ್ಥಾಯಿಸಮಿತಿ ಅಧ್ಯಕ್ಷರು | ಪೌರಾಯುಕ್ತರು |
|---|---|---|---|
| ನಗರಸಭೆ, ತುಮಕೂರು. | ನಗರಸಭೆ, ತುಮಕೂರು. | ನಗರಸಭೆ, ತುಮಕೂರು. | ನಗರಸಭೆ, ತುಮಕೂರು. |